ಸುತ್ತಿದರು. ಗಣೇಶ ಡಾಕ್ಟರ್‌ಗೆ ಫೋನು ಮಾಡಿ ಇದ್ದ ಹಕೀಕತ್ತು ಹೇಳಿದ. ಅವರು ‘ಅಂಬುಲೆನ್ಸ್ ಕಳಿಸ್ತೇನೆ, ಅದರಲ್ಲಿ ಪೇಷಂಟ್ ಹಾಕ್ಕೊಂಡು ಬರ್ರಿ’ ಅಂತ ಸೂಚಿಸಿದರು. ವಾಹನ ಬಂದಾಗ ಆ ವ್ಯಕ್ತಿ ಬದುಕಿರುವ ಬಗೆಗಿನ ಸುದ್ದಿ ನೆರೆಯವರ ಕಿವಿಗೆ ಬಿದ್ದು ಮಾಸ್ಕ್ ಹಾಕ್ಕೊಂಡು ದೂರ ದೂರ ನಿಂತು ನೋಡತಾ ಸೋಜಿಗಪಡತಿದ್ದರು.

ಡಾಕ್ಟರು ವಾಹನ ಬಂದ ಕೂಡಲೇ ರೋಗಿಗೆ ಸಲಾಯಿನು ಹಚ್ಚಿ ರಕ್ತಪರೀಕ್ಷೆ ಸೂಚಿಸಿದರು. ರಿಪೋರ್ಟ್ ಬಂದಾಗ ಆಶ್ಚರ್ಯ ಆದದ್ದೇನಂದ್ರ ಕೊರೊನಾ ಪಾಸಿಟಿವ್ ಇರಲಿಲ್ಲ. ಕ್ರಮೇಣ ಆತನಿಗೆ ಎಚ್ಚರಾಯಿತು. ಡಾಕ್ಟರಗೆ ಕೈ ಮುಗದ. ಅವರು ಗಣೇಶ ಜಗದೀಶರನ್ನ ಕರೆಕಳಿಸಿ, ‘ಇವರೇ ನಿಮ್ಮನ್ನ ಕರೆತಂದದ್ದು’ ಅಂತ ಹೇಳಿದಾಗ ಕೃತಜ್ಞತೆಯಿಂದ ಕಣ್ಣರಳಿಸಿ ಕೈ ಜೋಡಿಸಿದ. ಆ ಬಳಿಕ ನಿಧಾನಕ್ಕ ಒಂದೊಂದಾಗಿ ತಿಳೀತು. ಮುಂಬಯಿಯಲ್ಲಿ ನಿವೃತ್ತಿಯಾಗಿ ಹೆಂಡತಿ ಸತ್ತ ಬಳಿಕ ಆತ ತಾನು ಈ ಹಿಂದೆ ಇದ್ದ ಧಾರವಾಡದಲ್ಲಿರಬೇಕಂತ ಬಯಸಿ ಬಾಡಿಗಿ ಮನಿಯಲ್ಲಿ ಕಳೆದೆರಡು ವರ್ಷದಿಂದ ವಾಸವಾಗಿದ್ದ. ಇದ್ದ ಒಬ್ಬ ಮಗ ಅಮೆರಿಕದಲ್ಲಿ ನೆಲೆಗೊಂಡಿದ್ದಾನಂತ. ಈ ಸುದ್ದಿ ಟಿ.ವಿ. ಮಾಧ್ಯಮದವರ ಕಿವಿಗೆ ಬಿದ್ದು ಹಲವಾರು ಆಯಾಮಗಳಿಂದ ಹಲವಾರು ದಿನ ಚರ್ಚೆ ನಡೀತಾ ಗಣೇಶ, ಜಗದೀಶರ ಹೆಸರು ಪ್ರಸಿದ್ಧಗೊಂಡವು.

ಒಂದು ದಿನ ಗಣೇಶನಿಗೆ ಪ್ರೊಫೆಸರ್ ಸಿದ್ದಪ್ಪ ಅವರಿಂದ ಫೋನು ಬಂತು. ಅವರು ಮಾತಾಡೋ ಮೊದಲೇ, ‘ಸರ್, ಇನ್ನ ಸೊಲ್ಪ ದಿನ ತಡಕೋರಿ, ನಿಮ್ಮ ಕೆಲಸಾ ಮಾಡಿಕೊಡತೀನಿ. ನಾನೇನೂ ಸಾಯೋದಿಲ್ಲ, ಸಾಯೋದಾದ್ರೂ ನಿಮ್ಮ ಕೆಲಸಾ ಮಾಡಿಕೊಟ್ಟೇ ಸಾಯ್ತೀನಿ’ ಅಂದ.

‘ಹಿಂಗ್ಯಾಕ ಮಾತಾಡ್ತೀರಿ ಗಣೇಶ. ತಗಡು ಹಾಕೋ ವಿಷಯ ಬಿಡ್ರಿ ಅತ್ತಾಗ. ನೀವು ನಮ್ಮ ಅಳಿಯ ಜಗದೀಶ ಎಷ್ಟು ಚೊಲೋ ಕೆಲ್ಸಾ ಮಾಡ್ತಾ ಅದೀರಿ, ಟಿ.ವಿ.ಯಲ್ಲಿ ನೋಡಿ ನಮ್ಮ ಮನಿಯವರು ನಿಮ್ಮನ್ನ ತಾರೀಫು ಮಾಡತಾ ಅದಾರ... ಜಗ್ಗು ಯಾಕೋ ಫೋನ್ ಎತ್ತತಾ ಇಲ್ಲ. ನೀವು ಬ್ಯಾರೆ ಅಲ್ಲ, ಜಗ್ಗು ಬ್ಯಾರೆ ಅಲ್ಲ. ನಮ್ಮ ಬಡಾವಣೆಗೇ ಲಾಕ್‌ಡೌನ್ ಮಾಡಿದ್ದು ಗೊತ್ತೈತಲ್ಲ. ಇಲ್ಲಿ ಹೊರಗಿನವರು ಯಾರೂ ಬರುವಂಗಿಲ್ಲ. ಒಂದಿಷ್ಟು ರೇಷನ್ ಬೇಕಿತ್ತು. ಮನಿಯಾಗ ನಾವಿಬ್ರೇ ಇರೋದು. ಇನ್ನೊಂದು ಮಾತು... ನಮ್ಮ ಮನಿಯಿಂದ ನಾಕು ಮನಿ ದಾಟಿದ್ರ ಗೆಳೆಯ ಚಂದ್ರುನ ಮನಿ ಐತಿ. ಅವ ಕೊರೊನಾ ಆಗಿ ಆರಾಮಾಗಿ ಬಂದಾನಂತ. ಅವನ ಮಗಳಿಗೆ ಫೋನಿನಲ್ಲಿ ಕೇಳಿದೆ. ಆಗ ಆಕಿ, ಅಂಕಲ್ ಮತ್ತ ಸಮಸ್ಯಾ ಆಗೇತಿ ಅಂದಳು. ಆಗ ನಾನು, ನಮ್ಮ ಹುಡುಗರು ಕೊರೊನಾ ಸೈನಿಕರಾಗಿ ಕೆಲಸಾ ಮಾಡ್ತಿದ್ದಾರಮ್ಮ, ನಿಮಗೇನಾರ ಸಹಾಯ ಬೇಕಿದ್ರ ಅವರಿಗೆ ಹೇಳ್ತೀನಿ ಅಂದೆ. ಆಗ ಆಕಿ ಕಳಿಸಿಕೊಡ್ರಿ ಅಂದಳು. ನೀವು ನಮ್ಮ ಮನಿಗೆ ಬಂದು ರೇಷನ್ ಕೊಟ್ಟು ಅವರ ಮನಿಗೆ ಹೋಗವಂತ್ರಿ.’



‘ಆಯ್ತು ಸರ್, ಸಾಯಂಕಾಲ ಬರ್ತೀನಿ.’

ಸಾಯಂಕಾಲ ಗಣೇಶ ಪ್ರೊಫೆಸರ್ ಹೇಳಿದ ಕಿರಾಣಿ ಸಾಮಾನು, ಹಾಲಿನ ಪಾಕೀಟು, ಸಿ ವಿಟಮಿನ್ ಗುಳಿಗೆ ತಗೊಂಡು ಅವರ ಮನಿಗೆ ಬಂದ.

‘ನೀವು ನಿಮ್ಮ ಪೋಷಾಕಿನಲ್ಲಿ, ಮಾಸ್ಕ್-ಷೀಲ್ಡ್ ಹಾಕ್ಕೊಂಡು ಬಂದ್ರೂ ಅಂತರದಾಗ ನಿಂತರೂ ನಿಮ್ಮನ್ನ ನೋಡಿ ಸಮಾಧಾನ ಆತು ನೋಡ್ರೀ. ನನಗಂತೂ ಒಳಗs ಇದ್ದಿದ್ದು ಬೇಜಾರಾಗೇತಿ... ಹೊರಗ ಹೋಗೂದಿಲ್ಲ, ಯಾರೂ ಮನಿಗೆ ಬರೂದಿಲ್ಲ. ಯಾವಾಗ ಏನಾಗತದೋ ಅನ್ನೋ ಭಯ ಬ್ಯಾರೆ. ಎಂಥಾ ಸಂಕಟದ ಸಮಯ ಇದು! ಛೆ ಛೇ, ಇಂಥದ್ದು ಕಣ್ಣು ಕಂಡಿರಲಿಲ್ಲ, ಅನುಭವಕ್ಕ ಬಂದಿರಲಿಲ್ಲ... ಫೋನಿನಲ್ಲಿ ಮಾತಾಡ್ತೀವಿ, ಖರೆ, ಆದ್ರ ಎದುರಾ